


International Journal of Kannada Research
www.kannadajournal.com

**ISSN: 2454–5813**
IJSR 2016; 2(3): 149-152
© 2016 IJKS
www.kannadajournal.com
Received: 26-05-2016
Accepted: 27-06-2016

**ಡಾ: ವೈ.ಎ.ದೇವಋಷಿ**
ಸಹಾಯಕ ಪ್ರಾಧ್ಯಾಪಕರು ಶ್ರೀ. ಚನ್ನಬಸವೇಶ್ವರ ಪದವಿ ಮಹಾವಿದ್ಯಾಲಯ
ಭಾಲ್ಕಿ. ಬೀದರ ಜಿಲ್ಲೆ ಕರ್ನಾಟಕ

**Correspondence**
**ಡಾ: ವೈ.ಎ.ದೇವಋಷಿ**
ಸಹಾಯಕ ಪ್ರಾಧ್ಯಾಪಕರು
ಶ್ರೀ. ಚನ್ನಬಸವೇಶ್ವರ ಪದವಿ ಮಹಾವಿದ್ಯಾಲಯ ಭಾಲ್ಕಿ. ಬೀದರ ಜಿಲ್ಲೆ ಕರ್ನಾಟಕ

# ಅಲೆಮಾರಿ ಜನಾಂಗ; ಸುಡುಗಾಡು ಸಿದ್ಧರ ಐತಿಹ್ಯಗಳು

**ಡಾ: ವೈ.ಎ.ದೇವಋಷಿ**

**ಪ್ರವೇಶಿಕೆ :** ಭಾರತ ಬಹು ಸಂಸ್ಕೃತಿಗಳ ದೇಶ. ಈ ದೇಶದಲ್ಲಿ ಅಸಂಖ್ಯಾತ ವಿಶಿಷ್ಟ ಸಮುದಾಯಗಳು ನೆಲೆ ನಿಂತಿವೆ. ಅದರಲ್ಲೂ ಅಲೆಮಾರಿ ಸಮುದಾಯಗಳು ನಿರ್ದಿಷ್ಟ ಗಣಿತಕ್ಕೆ ಸಿಕ್ಕಿಲ್ಲ. ಅಲೆಮಾರಿ ಕುಟುಂಬಗಳು ಜೀವನೋಪಾಯಕ್ಕಾಗಿ ಒಂದು ನೆಲೆಯಿಂದ ಇನ್ನೊಂದು ನೆಲೆಗೆ ಅಲೆದಾಡುತ್ತಲೇ ಇರುತ್ತವೆ. ಅಲೆಮಾರಿ ಸಮುದಾಯಗಳಿಗೆ ಅವರದೆ ಆದ ಭೂಮಿ, ಊರು, ಕೇರಿ ಇರುವುದಿಲ್ಲ. ಹಲವಾರು ಅಲೆಮಾರಿ ಸಮುದಾಯಗಳಿಗೆ ಇಂದಿಗೂ ನಿರ್ದಿಷ್ಟ ಹೆಸರುಗಳಿಲ್ಲ. ಈ ಮಾತನ್ನು ಕರ್ನಾಟಕದಲ್ಲಿನ ಅಲೆಮಾರಿ ಸಮುದಾಯಗಳಿಗೆ ಅನ್ವಯಿಸಿಕೊಂಡು ನೋಡಿದಾಗ, ಒಂದು ಅಲೆಮಾರಿ ಸಮುದಾಯವನ್ನು ರಾಜ್ಯದ ಒಂದು ಕಡೆಗೆ ಒಂದು ಹೆಸರಿನಿಂದ ಗುರುತಿಸಿದರೆ ಅದೇ ಸಮುದಾಯವನ್ನು ರಾಜ್ಯದ ಇನ್ನೊಂದು ಕಡೆಗೆ ಬೇರೆ ಹೆಸರಿನಿಂದ ಕರೆಯಲಾಗುತ್ತದೆ. ನಿರ್ದಿಷ್ಟ ಹೆಸರಿಗೆ ಒಳಗಾಗದೇ ಬಹು ನಾಮಗಳಿಗೆ ಒಳಗಾಗಿವೆ. ಅಲೆಮಾರಿ ಸಮುದಾಯಗಳು ಜೀವನದುದ್ದಕ್ಕೂ ಸ್ಥಿರವಾಗಿ ನೆಲೆ ನಿಂತವರಲ್ಲ. ಅಲೆದಾಡುವದೇ ಅವರ ಜೀವನದ ಗತಿ. ಒಂದು ಕಡೆ ಗಂಟೆಗಟ್ಟಲೇ ಕೂರುವುದು ಅವರಿಗೆ ಅಭ್ಯಾಸವಿಲ್ಲ.

ವಿಶ್ವ ಸಂಸ್ಥೆಯ ಇತ್ತೀಚಿನ ಅಂದಾಜಿನ ಪ್ರಕಾರ ವಿಶ್ವದ ಜನ ಸಂಖ್ಯೆಯಲ್ಲಿ ಶೇಕಡಾ 20ರಷ್ಟು ಜನ ಅಲೆಮಾರಿಗಳಿದ್ದಾರೆ. ಭಾರತದ 1981 ರ ಜನಗಣತಿಯ ಪ್ರಕಾರ 1929 ಜಾತಿ ಮತ್ತು ಬುಡಕಟ್ಟು ಸಮುದಾಯಗಳಿವೆ. ಭಾರತದಲ್ಲಿ ಅಲೆಮಾರಿ ಸಮುದಾಯದ ಜನ ಸಂಖ್ಯೆ ಹತ್ತು ಕೋಟಿ ಮೀರಿದೆ.

ಕರ್ನಾಟಕ ರಾಜ್ಯದಲ್ಲಿ ಹಲವಾರು ಅಲೆಮಾರಿ ಸಮುದಾಯಗಳಿದ್ದು; ಅವರೆಲ್ಲ ಹಿಂದುಳಿದವರು. ಅವರು ತಮ್ಮದೇ ಆದ ಆಚಾರ–ವಿಚಾರ, ನಡೆ–ನುಡಿ, ಸಂಸ್ಕೃತಿ ಮತ್ತು ಪರಂಪರೆಗಳೊಂದಿಗೆ ಜೀವನ ನಡೆಸುತ್ತಿದ್ದಾರೆ. ಇಂತಹ ಅಲೆಮಾರಿ ಸಮುದಾಯಗಳಲ್ಲಿ 'ಸುಡುಗಾಡು ಸಿದ್ಧ' ಸಮುದಾಯವೂ ಒಂದು, ಈ ಸಮುದಾಯದ ಜನರು ತಮ್ಮ ಹೊಟ್ಟೆಪಾಡಿಗಾಗಿ ವಿಭಿನ್ನ ಪ್ರದರ್ಶನಗಳನ್ನು (ಈಂಟಇ ಠಿಜಡಿಜಿಂಡಿಟಚಿಟಿಛಿಜ) ನೀಡುತ್ತಾರೆ.

ಸುಡುಗಾಡು ಸಿದ್ಧರು ಜೋಗಿ ಭಿಕ್ಷುಗಳಂತಿದ್ದು, ಇವರನ್ನು ತೆಲುಗು ಜಂಗಮರೆಂದು, ಗೊಂಬೆಯಾಟದವರೆಂದು ಮತ್ತು ಪಾಕನಟ್ಟಿಗೊಲ್ಲರೆಂದು ಕರೆಯುವರು. ಇವರನ್ನು ಕಾಡು ಪಾಪರೆಂದೂ ಕರೆಯುತಾರೆ. 'ಸುಡುಗಾಡು' ಎಂದರೆ ಶವಗಳನ್ನು ಹೂಳುವ ಮತ್ತು ಸುಡುವ ಸ್ಥಳ. 'ಸಿದ್ಧ' ಎಂದರೆ ತನ್ನ ಬಯಕೆಯನ್ನು ಈಡೇರಿಸಿಕೊಂಡವನು ಏನನ್ನಾದರೂ ಸಾಧನೆಯನ್ನು ಮಾಡಿದವನು. (ಸಾಧಿಸಿದವನು) ಎಂದರ್ಥ. 'ಸುಡುಗಾಡು ಸಿದ್ಧ' ಎಂದರೆ ಸ್ಮಶಾನದಲ್ಲಿ ಸಿದ್ಧಿಯನ್ನು ಪಡೆದವನು ಎಂದರ್ಥ. ಸುಡುಗಾಡು ಸಿದ್ಧರು ಸ್ಮಶಾನದಲ್ಲಿನ ಮಾನವನ ಎಲುಬುಗಳನ್ನು ಸಂಗ್ರಹಿಸಿ ಮಾಟ–ಮಂತ್ರ ಹಾಗೂ ಇಂದ್ರಜಾಲ (ಜಾದು)ಕ್ಕೆ ಬಳಸುತ್ತಾರೆ. ಸ್ಮಶಾನವೇ ಇವರಿಗೆ ಮಾಟ ಮಂತ್ರದ ಶಕ್ತಿಯನ್ನು ಪಡೆಯುವ ಪ್ರಾಶಸ್ತ್ಯ ಸ್ಥಳವಾಗಿದೆ. ಇವರು ಸ್ಮಶಾನದ ಒಡೆಯನಾದ ಶಿವನ ಆರಾಧಕರಾಗಿದ್ದಾರೆ. ಸುಡುಗಾಡು ಸಿದ್ಧರನ್ನು 'ಮಸಣದ ಒಡೆಯರು' ಎಂದೂ ಸಹ ಕರೆಯುವರು.

**ಐತಿಹ್ಯಗಳು:** ಪ್ರತಿಯೊಂದು ಜಾತಿ ಜನಾಂಗಗಳ ಮೂಲ ತಿಳಿಯಲು ಸಾಮಾನ್ಯವಾಗಿ ಜನಪದ ಕಥೆಗಳ, ಐತಿಹ್ಯ ಮತ್ತು ಪೌರಾಣಿಕ ಅಂಶಗಳು ಸಹಕಾರಿಯಾಗುತ್ತವೆ. ಇವುಗಳಿಂದ ನೂರಕ್ಕೆ ನೂರರಷ್ಟು ಸತ್ಯ ಸಂಗತಿಗಳನ್ನು ನಿರ್ಧಾರ ಮಾಡುವುದು ಕಷ್ಟ ಸಾಧ್ಯ. ಆದರೂ ನಿರ್ದಿಷ್ಟ ದಾಖಲೆಗಳು ಇಲ್ಲದಿರುವುದರಿಂದ ಇವುಗಳನ್ನೇ ಆಧಾರವಾಗಿಟ್ಟುಕೊಂಡು ಪರಾಮರ್ಶಿಸಿದಾಗ ಕೆಲವೊಂದು ಸತ್ಯ ಸಂಗತಿಗಳು ಗಮನಕ್ಕೆ ಬರುತ್ತವೆ. ಸುಡುಗಾಡು ಸಿದ್ಧರು ತಮ್ಮ ಜನಾಂಗದ ಮೂಲವನ್ನು ಇದೇ ರೀತಿಯಾಗಿ ಜನಪದ ಕಥೆಗಳು, ಐತಿಹ್ಯಗಳು, ಪೌರಾಣಿಕ ಅಂಶಗಳ ಮೂಲಕ ಗುರುತಿಸುತ್ತಾರೆ.

ಸುಡುಗಾಡು ಸಿದ್ಧರ ಬಗ್ಗೆ ಇರುವ ಕೆಲವೂ ಐತಿಹ್ಯ ವಿಚಾರಗಳು ಇಂತಿವೆ.–

**ನವಕೋಟಿ ಸಿದ್ಧರ ಐತಿಹ್ಯ**

"ಶಿವ ತಪಸ್ಸನ್ನು ಮಾಡುತ್ತಿರುವಾಗ ಅವನ ಸೇವೆ ಮಾಡಲು ಪಾರ್ವತಿ 'ನವಕೋಟಿ ಸಿದ್ಧ'ರನ್ನು ಸೃಷ್ಠಿ ಮಾಡಿದಳು. ಈ ಸಿದ್ಧರು ತಪಸ್ಸಿನ ಸಂದರ್ಭದಲ್ಲಿ ಶಿವನ ಸೇವೆ ಮಾಡಿದರು. ಶಿವನ ತಪಸ್ಸು ಮುಗಿದಾಗ "ನಾವು ಇನ್ನು ಏನು ಮಾಡಬೇಕು ಎಂದು ನವಕೋಟಿ ಸಿದ್ಧರು ಪಾರ್ವತಿಯನ್ನು ಕೇಳ ಹತ್ತಿದರು. ಆಗ ಪಾರ್ವತಿಯು ಶಿವನಲ್ಲಿರುವ ಗಂಟೆ, ಕಮಂಡಲ, ರುದ್ರಾಕ್ಷಿ ಮತ್ತು ತ್ರಿಶೂಲವನ್ನು ಕೊಟ್ಟು ಭೂಲೋಕಕ್ಕೆ ಹೋಗಿರೆಂದು ಕಳುಹಿಸಿದಳು. ಆ ನವಕೋಟಿ ಸಿದ್ಧರೆ ಇಂದಿನ ಸುಡುಗಾಡು ಸಿದ್ಧರು"[1] ಎಂಬುದಾಗಿ ಕಥೆಯ ಮುಖಾಂತರ ಸಿದ್ಧ ಜನಾಂಗದ ಇಂದಿನ ಪೀಳಿಕೆಯವರು ಹೇಳುತ್ತಾರೆ.

**ಚೆನ್ನನ ಐತಿಹ್ಯ**

"ಪಾರ್ವತಿ ತನ್ನ ಮುಟ್ಟಿನಿಂದ ಹುಟ್ಟಿದ ಚೆಲುವಾಗಿದ್ದ ಕೂಸಿಗೆ 'ಚೆನ್ನ' ಎಂದು ನಾಮಕರಣ ಮಾಡಿ, ಮಗುವನ್ನು ಕರೆತಂದು 'ಕಾಮಧೇನುವನ್ನು' ಕಾಯಲು ನೇಮಿಸಿದಳು. ಚೆನ್ನ ದಿನನಿತ್ಯ ಕಾಮಧೇನು ಕಾಯಲು ಹೋಗುವಾಗ, ಬುತ್ತಿ ಕಟ್ಟುವಾಗ ಹಾಲಿನ ಕೆನೆಯನ್ನಾಗಲಿ, ಬೆಣ್ಣೆಯನ್ನಾಗಲಿ ಎಂದೂ ಕಟ್ಟಬೇಡ ಎಂದು ಪಾರ್ವತಿಗೆ ಶಿವನು ಆಜ್ಞೆ ಮಾಡಿದ್ದನು. ಒಮ್ಮೆ ಚೆನ್ನನಿಗೆ ಬುತ್ತಿ ಕಟ್ಟುವಾಗ ಮರೆತು ಹಾಲಿನ ಜೊತೆ ಕೆನೆ ಬಂದಿತು. ಚೆನ್ನನು ಕೆನೆಯನ್ನು ತಿನ್ನಲು ಬಲು ರುಚಿಯಾಗಿರುವಾಗ ಇದನ್ನು ಕೊಡುವ ಕಾಮಧೇನು ಅದೆಷ್ಟು ರುಚಿಯಾಗಿರಬೇಕೆಂದು ಆಲೋಚಿಸಿ ಕಾಮಧೇನುವನ್ನು ಕೊಂದು ತಿಂದು ಬಿಡುತ್ತಾನೆ. ಈ ಸುದ್ದಿ ಶಿವನಿಗೆ ತಲುಪುತ್ತದೆ. ಇದರಿಂದ ಕೋಪಿತನಾದ ಶಿವನು ಕೊಲೆಗಡಕನಾದ ಚೆನ್ನನಿಗೆ "ಚಂಡಾಲನಾಗಿ ಬದುಕುತ್ತ ಸುಡಗಾಡದಲ್ಲಿ ಬಿದ್ದಿರು" ಎಂದು ಶಾಪ ಕೊಡುತ್ತಾನೆ. ಆಗ ಚೆನ್ನನು ಶಿವನಿಗೆ ಎಷ್ಟು ಪರಿಪರಿಯಾಗಿ ಕೇಳಿಕೊಂಡರೂ ಪ್ರಯೋಜನವಾಗಲಿಲ್ಲ. ನಾನು ಇನ್ನು ಬದುಕುವದಾದರೂ ಹೇಗೆಂದು ಚೆನ್ನನು ಕೇಳಲು, ಶಿವನು "ನೀನು ಮುಟ್ಟಿದ ಕಲ್ಲು ಕೆಂಡವಾಗಲಿ, ನೀರು ಸೆರೆಯಾಗಲಿ" ಎಂದು ಹೇಳಿ ಕಳುಹಿಸಿದನು. ಆದಿ ಚೆನ್ನನು ಸುಡಗಾಡಿಗೆ ಬಂದು, ನಂದಿಯ ಚರ್ಮವನ್ನು ಜೊಳಿಗೆ ಮಾಡಿ, ಗುಂಡಿಗೆಯನ್ನು ಗಂಟಿ ಮಾಡಿ, ಕೊಂಬನ್ನು ಕೋಲನ್ನಾಗಿ ಮಾಡಿಕೊಂಡು ಮನೆಮನೆ ತಿರುಗಿ 'ಕ್ವಾರಾಣ ಭಿಕ್ಷೆ' ಬೇಡಿ, ಸುಡಗಾಡು ಕಾಯುತ್ತ ಜೀವಿಸ ತೊಡಗಿದನು.

ಒಂದು ದಿನ ಚೆನ್ನನು ಖಂಡವನ್ನು ತಿಂದು, ಸೆರೆ ಕುಡಿದು ಬರುತ್ತಿರುವಾಗ ಬೆನ್ನಹಿಂದೆ ಸ್ತ್ರೀಯೊಬ್ಬಳು ಬರುತ್ತಿರುವುದು ನೋಡಿ ಕುಡಿದ ಅಮಲಿನಲ್ಲಿ ತಿರುಗಿ ನೋಡಿ ಆ ಹೆಣ್ಣಿಗೆ ಮನಸೋತು ಆಕೆಯ ಬೆನ್ನುಹತ್ತಿದನು. ಆ ಹೆಣ್ಣು ಜಾಂಬವನ ಮಗಳು ಪದ್ಮಿನಿಯಾಗಿದ್ದಳು. ಪದ್ಮಿನಿ ತಂದೆಗೆ ಆ ವಿಷಯವನ್ನು ತಿಳಿಸಿದಳು. ಜಾಂಬವ ಮುನಿ ಸೇಡು ತೀರಿಸಿಕೊಳ್ಳಲು ಇದೊಂದು ಸುಸಮಯವೆಂದು ತಿಳಿದು ಮಗಳಿಗೆ ಚೆನ್ನನಿಂದ 'ನಾನು ಬೇಡಿದ್ದನ್ನು ಕೊಡು' ಎಂದು ವಚನ ಕೇಳಲು ಹೇಳುವನು. ಹೆಣ್ಣಿನಲ್ಲಿ ಅತೀವ ವ್ಯಾಮೋಹವುಳ್ಳವನಾಗಿದ್ದರಿಂದ ಪದ್ಮಿನಿಗೆ ವಚನ ಕೊಟ್ಟನು. ಆ ಪ್ರಕಾರವಾಗಿ ನಂದೀಶ್ವರನ ಚರ್ಮ, ಗುಂಡಿಗೆ ಹೃದಯ ಬೇಡಲು ಎಲ್ಲವನ್ನೂ ಚೆನ್ನನು ಕೊಟ್ಟು ಬಿಟ್ಟನು. ಅವುಗಳನ್ನೆಲ್ಲ ಪದ್ಮಿನಿ ತಂದು ತನ್ನ ತಂದೆಗೆ ಒಪ್ಪಿಸಿ, ಚೆನ್ನನ ಜೊತೆಗೆ ಸರಸ-ಸಲ್ಲಾಪದಲ್ಲಿ ತೊಡಗಿದಳು.

ಆ ಕಡೆ ಜಾಂಬವ ಮುನಿ ಚರ್ಮವನ್ನು ಸುಣ್ಣದಲ್ಲಿ ಹಾಕಿ ಸುಡುವುದು, ಕೆರೆಯುವುದು, ಉಳಿಯಿಂದ ಚುಚ್ಚುವುದನ್ನು ಮಾಡಲು ನಂದಿಯ ಆತ್ಮಕ್ಕೆ ನೋವಾಗ ಹತ್ತಿತು. ಕೊಟ್ಟ ವಚನಕ್ಕೆ ಮಗ ತಪ್ಪಿ ನಡೆದನೆಂದು ನಂದಿಯು ಸಿಟ್ಟಾಗಿ ಆಚಂದ್ರಾರ್ಕ ನಿನಗೆ ಬಡತನವಿರಲಿ, ನಿನ್ನ ಪಾಲಿನ ಭೂಮಿ ಬೇರೆಯವರ ಪಾಲಾಗಲಿ ಎಂದು ಶಾಪವಿತ್ತನು. ಆನಂತರ ಚೆನ್ನನ ಮಾಟ-ಮಂತ್ರದ ಬೇರೆಯವರ ಪಾಲಾದವು. ಮದ್ಯ-ಮಾಂಸ-ಸ್ತ್ರೀಯ ಅಮಲನಾದಾಗ ಸುಡಗಾಡಿನಲ್ಲಿ ಮಠಪತಿ ಭಿಕ್ಷೆಗೆ ಬರುವನು. ಆಗ ಆದಿಚೆನ್ನನು ತನ್ನಲ್ಲಿರುವ ಜೋಳಿಗೆ, ಗಂಟೆ, ಕಮಂಡಲ, ಕೋಲುಗಳನ್ನೆಲ್ಲ ಅವನಿಗೆ ದಾನವಾಗಿ ಕೊಟ್ಟು ಜೀವನ ಸಾಗಿಸಹತ್ತಿದನು. ಸುಡಗಾಡನ್ನು ಕಾವಲು ಮಾಡುತ್ತ ಅಲ್ಲಿಯೇ ಇದ್ದು ಮುಂದೆ ಕೆಲವೊಂದು ಸಿದ್ಧಿಗಳನ್ನು ಪಡೆದನು. ಕಾಲಾನಂತರ ಸುಡಗಾಡಿನಲ್ಲಿರುವ ಸಿದ್ಧನನ್ನು 'ಸುಡಗಾಡು ಸಿದ್ಧ' ಎಂದು ಕರೆಯತೊಡಗಿದರು. ಅವನ ವಂಶಜರೇ ನಾವು ಎನ್ನುತ್ತಾರೆ ಈಗಿನ ಸುಡುಗಾಡು ಸಿದ್ಧರು"[2]

**ಘೋರಕ್ಷನ ಐತಿಹ್ಯ**

ಸುಡಗಾಡು ಸಿದ್ಧರ ಮೂಲವನ್ನು ಕುರಿತು ಮತ್ತೊಂದು ಐತಿಹ್ಯ ಈ ರೀತಿಯಾಗಿದೆ. "ಘೋರಕ್ಷ ಎಂಬ ರಾಕ್ಷಸನು ದೇವಾನುದೇವತೆಗಳಿಗೆಲ್ಲ ತುಂಬಾ ತೊಂದರೆ ಕೊಡುತ್ತಿದ್ದನು. ಯಂತ್ರ-ಮಂತ್ರ-ಮಾಟಾದಿಗಳಲ್ಲಿ ಬಲು ಚಾಣಾಕ್ಷನಾಗಿದ್ದನು. ಸಿದ್ಧರನ್ನು ಇವನು ತನ್ನ ಮನೆಯ ಬಾಗಿಲು ಕಾಯಲು ಇರಿಸಿಕೊಂಡಿದ್ದನು. ಘೋರಕ್ಷನ ಉಪಟಳ ತಾಳಲಾರದೆ ದೇವಾನುದೇವತೆಗಳೆಲ್ಲ ಶಿವನ ಮೊರೆ ಹೊಕ್ಕರು. ಆತ ರೇವಣಸಿದ್ಧನನ್ನು ಕಳುಹಿಸಿದನು. ಶಿವನ ಮಾಯಾಜಾಲದಿಂದ ಹಾವು-ಚೇಳುಗಳನ್ನು ಸೃಷ್ಟಿಸಿದನು. ಘೋರಕ್ಷನ ಸಂಹಾರಕ್ಕಾಗಿ ಬರುತ್ತಿದ್ದ ರೇವಣಸಿದ್ಧನಿಗೆ ಕಾವಲು ಕಾಯುತ್ತಿದ್ದ ಸಿದ್ಧರು ಅತಿಯಾದ ತೊಂದರೆ ಕೊಟ್ಟರು. ಕಡೆಯದಾಗಿ, ಶಿವನು ತನ್ನ ಮೂರನೆಯ ಕಣ್ಣಿನಿಂದ ಎಲ್ಲರನ್ನು ಭಸ್ಮ ಮಾಡಿದನು. ನಂತರ ಘೋರಕ್ಷ ರಾಕ್ಷಸನನ್ನು ಸಂಹರಿಸಿ ಮರಳಿ ಬರುತ್ತಿರುವಾಗ, ಸ್ಮಶಾನದಲ್ಲಿ ಬೂದಿಯಾಗಿ ಬಿದ್ದಿದ್ದ ಸಿದ್ಧರನ್ನು ನೋಡಿ ಕರುಣೆ ಬಂದು ಮತ್ತೆ ಬದುಕಿಸಿದನು. ಸತ್ಯ-ನ್ಯಾಯ-ನೀತಿಯಿಂದ ನಡೆಯಿರಿ. ಜನರಿಗೆ ಧರ್ಮ ಬೋಧನೆ ಮಾಡಿರಿ ಎಂದು ಜೋಳಿಗೆ, ವಿಭೂತಿ, ರುದ್ರಾಕ್ಷಿ, ಕಮಂಡಲ, ತ್ರಿಶೂಲವನ್ನು ಕೊಟ್ಟು ಹರಸಿ ಹೋದನು. ಸಿದ್ಧರು ಸುಡಗಾಡಿನಲ್ಲಿ ಜನಿಸಿದ್ದರಿಂದ ಇವರಿಗೆ ಸುಡಗಾಡ ಸಿದ್ಧರೆಂದು ಕರೆಯಲು ಪ್ರಾರಂಭಿಸಿದರು. ಶಿವನಿಂದ ಜನ್ಮ ಪಡೆದುದರಿಂದ ನಾವು ಶಿವನ ವಂಶಜರು, ಶಿವಮತದವರು ಎಂದು ಸುಡಗಾಡು ಸಿದ್ಧರು ವಾದ ಮಾಡುತ್ತಾರೆ"[3]

ಸುಡುಗಾಡು ಸಿದ್ಧರು ಸದಾ ಸಂಚಾರಿಗಳಾಗಿ ಊರಿಂದೂರಿಗೆ ಅಲೆಯುತ್ತ, ಹಳ್ಳಿಯ ಜನತೆಗೆ ಧರ್ಮ-ನೀತಿ ಬೋಧನೆ ಮಾಡುತ್ತ, ದೆವ್ವ-ಭೂತ ಪೀಡೆ-ಪಿಶಾಚಿಗಳನ್ನು ಬಿಡಿಸಬಲ್ಲವರಾಗಿದ್ದಾರೆ. ಸತ್ತವರನ್ನು ಕೂಡ ಸ್ವಲ್ಪ ಕಾಲದವರೆಗೆ ಬದುಕಿಸುವ ಮಂತ್ರ ಶಕ್ತಿ ಇವರಲ್ಲಿದೆ ಎಂದು ಹೇಳುತ್ತಾರೆ. ಭೂತ ಭವಿಷ್ಯದ ಬಗ್ಗೆ ಆಳವಾದ ಜ್ಞಾನ ಹೊಂದಿರುವ ಸುಡಗಾಡ ಸಿದ್ಧರು ಊರ ಹೊರವಲಯದಲ್ಲಿ ಸ್ಮಶಾನದಲ್ಲಿದ್ದು ಅದನ್ನು ಕಾವಲು ಮಾಡುತ್ತಾ ತಾವು ಸತ್ಯ ಹರಿಶ್ಚಂದ್ರನ ಪರಂಪರೆಯವರೆಂದು ಹೇಳಿಕೊಳ್ಳುತ್ತಾರೆ.

ಮೂಲದ ಬಗ್ಗೆ ಕೆಲವರನ್ನು ಕೇಳಿದಾಗ "ತಾವು 'ಕಬ್ಬಲಿಗರ' ಕುಲದವರೆಂದು ಹೇಳಿ ಕೊಳ್ಳುತ್ತಾರೆ. ಕಬ್ಬಲಿಗ ಎಂಬುದು ಊರ ಕಾವಲು ಮಾಡುವ ತಳವಾರರ ಒಂದು ಪಂಗಡವಾಗಿದೆ. ಇದನ್ನು ಸಮರ್ಥಿಸಿಕೊಳ್ಳಲು ಒಂದು ಕಥೆಯನ್ನು ಸುಡಗಾಡ ಸಿದ್ಧರು ಹೇಳುತ್ತಾರೆ. ಊರನ್ನು ಕಾವಲು ಮಾಡಿ ಮೂವರು 'ಕಬ್ಬಲಿಗರು' ಊರ ಮಗ್ಗುಲದ ಹಳ್ಳದಲ್ಲಿ ಹೆಣಗಳನ್ನು ಸುಡುವ ಜಾಗದಲ್ಲಿ

ಮಲಗಿಕೊಂಡಿದ್ದರು. ಅಲ್ಲಿಗೆ ಶಿವ-ಪಾರ್ವತಿಯರು ಬಂದು "ನೀವು ಯಾರು? ಇಲ್ಲೇಕೆ ಮಲಗಿದ್ದೀರೆಂದು" ಕೇಳಲು, "ನಾವು ಊರ ತಳಾರರು" ಎಂದು ಕಬ್ಬಲಿಗರು ಹೇಳಿದಾಗ "ನೀವು ಸುಡಗಾಡದಲ್ಲಿ ಮಲಗಿದ್ದೀರಿ ಎಂದ ಮೇಲೆ ಇದನ್ನು ಕಾಯುತ್ತ, ಭಿಕ್ಷೆ ಬೇಡಿ ಬದುಕಿರಿ" ಎಂದು ಹೇಳಿ ಶಿವ-ಪಾರ್ವತಿ ಹೋದರು. ಅಂದಿನಿಂದ 'ಕಬ್ಬಲಿಗರು' ಹೋಗಿ ನಾವು 'ಸುಡಗಾಡ ಸಿದ್ಧ'ರಾದೆವು"[4] ಎನ್ನುತ್ತಾರೆ. ಕುಲ ಮತ್ತು ಮೂಲದ ಬಗೆಗೆ ಸುಡಗಾಡ ಸಿದ್ಧರು ತಾವು ಕುರುಬರ ಕುಲದ ಹಾಲಮತಕ್ಕೆ ಸಂಬಂಧಿಸಿದವರು. 'ಕಾಡ ಕುರುಬರು' ಎಂದು ಹೇಳುತ್ತಾರೆ. ಕಾಡು ಇಲ್ಲವೆ ಸುಡಗಾಡದಲ್ಲಿರುವ 'ಕಾಡಸಿದ್ಧ' ನು ತಮ್ಮ ಮೂಲ ಪುರುಷ ಎಂದೂ ಸಮರ್ಥಿಸಿಕೊಳ್ಳುತ್ತಾರೆ.

**ಸಿದ್ಧಯ್ಯನ ಐತಿಹ್ಯ**

ಕುರುಬ ಸಂತತಿಯ ಇನ್ನೊಂದು ರೂಪವೇ ಸುಡುಗಾಡು ಸಿದ್ದರೆಂಬುದಕ್ಕೆ ಅವರಲ್ಲಿ ಪ್ರಚಲಿತವಿರುವ ಒಂದು ಜನಪದ ಪುರಾಣ ಕತೆಯಲ್ಲಿ ನಿರೂಪಣೆ ಹೀಗಿದೆ;" ಒಂದು ದಿನ ಸಿದ್ಧನೆಂಬ ಕುರುಬನು ಮರಣ ಹೊಂದಲು, ಅವನ ಶವವನ್ನು ಸಂಸ್ಕಾರ ಮಾಡಲು ಸ್ಮಶಾನಕ್ಕೆ ಒಯ್ಯುತ್ತಾರೆ. ಅಲ್ಲಿ ಮೃತನ ಪತ್ನಿ ಮಾಳಮ್ಮ ಗಂಡನಿಗಾಗಿ ಗೋಳಿಡುತ್ತಿರುವುದನ್ನು ಕಂಡು ಶಿವಭಕ್ತನೊಬ್ಬ ಅವಳಿಗೆ ಸಮಾಧಾನ ಹೇಳುತ್ತಾನೆ. ನೋಡು ತಾಯಿ, ನೀನು ಈಗಲೆ ಹೋಗಿ ಭಕ್ತಿಭಂಡಾರಿ ಬಸವಣ್ಣನನ್ನು ಕಂಡು, ನಿನ್ನ ದುಃಖವನ್ನು ಹೇಳಿಕೊ ಕುರುಣಾಮಯಿ ಅಣ್ಣನವರು ಖಂಡಿತವಾಗಿಯೂ ನಿನ್ನ ದುಃಖ ನಿವಾರಣೆ ಮಾಡುವರು. ಎಂದು ಶಿವಭಕ್ತ ಹೇಳಿದಾಗ, ಅವನ ಹೇಳಿಕೆಯ ಮೇರೆಗೆ ಮಾಳಮ್ಮ ನೇರವಾಗಿ ಬಸವಣ್ಣನವರಲ್ಲಿಗೆ ಬಂದು ತನ್ನ ದುಃಖವನ್ನು ನಿವೇದಿಸಿಕೊಳ್ಳುತ್ತಾಳೆ. ಬಸವಣ್ಣ ಅವಳ ಗೋಳನ್ನು ಕೇಳಿ, ನೆರೆದವರೊಂದಿಗೆ ಸುಡುಗಾಡಿಗೆ ಬಂದು, ತನ್ನ ಆತ್ಮಜ್ಯೋತಿಯಿಂದ ಮತ್ತು ಮಂತ್ರ ವಾಣಿಯ ಮಹಿಮೆಯಿಂದ ಸತ್ತು ಸ್ಮಶಾನದಲ್ಲಿ ಸಂಸ್ಕಾರಕ್ಕಾಗಿ ಬಿದ್ದಿದ್ದ ಸಿದ್ಧನನ್ನು ಬದುಕಿಸುತ್ತಾನೆ. ದಂಪತಿಗಳಿರ್ವರೂ ಅಣ್ಣನ ಚರಣಕಮಲಗಳಿಗೆ ಎರಗಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿ, ಆ ಮಹಾಮಹಿಮನ ಲೀಲೆಗಳನ್ನು ಗುಣಗಾನ ಮಾಡುತ್ತಾರೆ. ಹೀಗೆ ಮತ್ತೆ ಜೀವದಾನವನ್ನು ಪಡೆದ ಸಿದ್ಧನು ಬಸವಣ್ಣನವರ ಉಪದೇಶದಂತೆ ಶಿವದೀಕ್ಷೆಯನ್ನು ಪಡೆದು, ವಿಭೂತಿ, ರುದ್ರಾಕ್ಷಿಗಳನ್ನು ಧರಿಸಿ ಶಿವನಾಮಗಳನ್ನು ಜಪಿಸುತ್ತ, ಬಸವಣ್ಣನ ಗುಣಗಾನ ಮಾಡುತ, ಸ್ಮಶಾನದ ಹೆಣಗಳ ಮೇಲಿನ ಬಟ್ಟೆ ಬರೆಗಳನ್ನು ತೊಡತ್ತ, ಶವಗಳಿಗೆ ಎಡೆಗಳನ್ನು ಸೇವಿಸುತ್ತ, ಸುಡುಗಾಡಿನಲ್ಲೇ ವಾಸ ಮಾಡತೊಡಗುತ್ತಾನೆ."[5] ಸುಡುಗಾಡಿನ ಸಿದ್ಧನ ಸಂತತಿಯಿಂದ ಬೆಳೆದವರೆ ಮುಂದೆ ಸುಡುಗಾಡು ಸಿದ್ಧಾರಾದರು ಎಂದು ಹೇಳುತ್ತಾರೆ.

**ಪದ್ಮಣ್ಣನ ಐತಿಹ್ಯ**

ಇನ್ನೊಂದು ಕತೆಯ ಪ್ರಕಾರ "ಪದ್ಮಣ್ಣನೆಂಬ ತುಂಟನೊಬ್ಬ ಬಸವಣ್ಣನ ಸತ್ವ ಪರೀಕ್ಷಿಸಲು ನಿಶ್ಚಯಿಸಿದ. ಬಸವಣ್ಣ ಮನೆಗೆ ಬಂದಾಗ ನಾನು ಸತ್ತು ಹೋಗಿದ್ದೇನೆಂದು ಬಸವಣ್ಣನಿಗೆ ಹೇಳು ಎಂದು ತನ್ನ ಹೆಂಡತಿಗೆ ಹೇಳಿ ಮಲಗಿಬಿಟ್ಟ. ಜ್ಞಾನಿಯಾದ ಬಸವಣ್ಣ ಎಲ್ಲ ಅರಿತಿದ್ದು ಪದ್ಮಣ್ಣ ಹೊದ್ದ ಮುಸುಕು ತೆಗೆಯುವಂತೆ ಆಕೆಗೆ ಸೂಚಿಸಿದ. ನಿಜಕ್ಕೂ ಪದ್ಮಣ್ಣ ಸತ್ತು ಹೋಗಿದ್ದನು! ಗಾಬರಿಗೊಂಡ ಮಡದಿ ಬಸವಣ್ಣನ ಕಾಲಿಗೆ ಬಿದ್ದು ಬೇಡಿದಾಗ ಸ್ಮಶಾನದಲ್ಲಿ ಪದ್ಮಣ್ಣನನ್ನು ಬದುಕಿಸಿದ ಬಸವೇಶ್ವರನು ಇನ್ನು ಮೇಲೆ ಸ್ಮಶಾನದಲ್ಲಿಯೇ ಇದ್ದು ಕಾವಲು ಮಾಡು ಎಂದು ಆದೇಶಿಸಿದನು. ಹೀಗೆ ಸ್ಮಶಾನದ ಕಾವಲುಗಾರನಾದ ಪದ್ಮಣ್ಣ ಕಾಲಾಂತರದಲ್ಲಿ ಸಿದ್ಧಣ್ಣನಾದನು. ಅವನ ಸಂತತಿ ಸುಡುಗಾಡು ಸಿದ್ಧರಾಗಿ ಮುಂದುವರೆಯಿತು"[6]

**ಶನಿದೇವನ ಐತಿಹ್ಯ**

"ದೇವಾನುದೇವತೆಗಳನ್ನೆಲ್ಲ ಕಾಡಿದ ಶನಿಯು ಶಿವನನ್ನು ಹಾಗೂ ಅವನ ಮಗ ಗಣೇಶನನ್ನು ಮತ್ತು ಮಾರುತಿಯನ್ನು ಇನ್ನೂ ಕಾಡಿರಲಿಲ್ಲ. ಅದಕ್ಕಾಗಿ ಪರಶಿವನ ಮುಂದೆ ಪ್ರತ್ಯಕ್ಷನಾದ ಶನಿಯು ದೇವಾನುದೇವ ನಿಮ್ಮ ಕಾಶಿಗೆ ನಾಳೆ ಪ್ರವೇಶ ಮಾಡಬೇಕೆಂದು ಇಚ್ಛೆ ಮಾಡಿದ್ದೇನೆ. ದಯವಿಟ್ಟು ನನ್ನನ್ನು ಮನ್ನಿಸಬೇಕೆಂದು ಕೇಳಿಕೊಳ್ಳುತ್ತಾನೆ. ಅದರಂತೆ ಮಾರನೆಯ ದಿನ ಶನಿ ಬರುತ್ತಾನೆ. ಅಂದು ಪರಶಿವನು ವಿಧಿವತ್ತಾಗಿ ಸುಡುಗಾಡಿನಲ್ಲಿ ವಾಸಿಸುವಂತಹ ಪ್ರಸಂಗ ಬಂದಿರುತ್ತದೆ. ಅದೇ ವೇಳೆಗೆ ಶನಿಯು ಪ್ರವೇಶ ಮಾಡುತ್ತಾನೆಂದು ಶಿವನು ಹೂತ ಶವವನ್ನು ಹೊರತೆಗೆದು, ಆ ಜಾಗದಲ್ಲಿ ಅವಿತುಕೊಳ್ಳುತ್ತಾನೆ. ಶನಿ ಕಾಡುವ ವೇಳೆ ಮುಗಿದ ನಂತರ ಶಿವನು ಹೋರ ಬರುತ್ತಾನೆ. ಗಾಳಿ ಮತ್ತು ಬೆಳಕಿಲ್ಲದ ಕಾರಣ ಶಿವನು ತುಂಬಾ ಬೆವತಿರುತ್ತಾನೆ. ಹಣೆಯ ಮೇಲೆ ಹನಿ ಹನಿಯಾಗಿದ್ದ ಬೇವರನ್ನು ತೆಗೆದು ಭೂಮಿಗೆ ಎಸೆದಾಗಾ ಬೆವರಿನಲ್ಲಿ ನವಕೋಟಿ ಜನರು ಜನ್ಮ ತಾಳಿದರು. ಸುಡುಗಾಡಿನಲ್ಲಿ ಹುಟ್ಟಿರುವುದರಿಂದ ಇವರಿಗೆ ಸುಡುಗಾಡು ಸಿದ್ಧರು ಎಂದು ನಾಮಕರಣ ಮಾಡಿದನು."[7] ಅವರ ಜೀವನೋಪಾಯಕ್ಕಾಗಿ ಶಿವನು ವಿಭೂತಿ, ಕಾವಿ, ರುದ್ರಾಕ್ಷಿ, ಕಮಂಡಲಗಳನ್ನು ದಯಪಾಲಿಸಿ ಅಜ್ಞಾನದಲ್ಲಿರುವ ಲೋಕಕ್ಕೆ ಕಲ್ಯಾಣವನ್ನುಂಟು ಮಾಡುತ್ತ, ಶುಭ-ಅಶುಭಗಳನ್ನು ಮುಂಚಿತವಾಗಿ ತಿಳಿಯದ ಜನಕ್ಕೆ ತಿಳಿಸುತ್ತ ದೇಶ ಸಂಚಾರ ಮಾಡಿರಿ ಎಂದು ಉಪದೇಶಿಸಿ ಕಳಿಸಿಕೊಡುತ್ತಾನೆ.

**ಗೋರಾಜನ ಐತಿಹ್ಯ**

ಪರಶಿವನಿಂದ ಶಿವದೀಕ್ಷೆ ಪಡೆದ ನವಕೋಟಿ ಸಿದ್ಧರು ದೇಶ ಸಂಚಾರ ಮಾಡುತ್ತ ಗೋರಾಜನ ಆಸ್ಥಾನಕ್ಕೆ ಬರುತ್ತಾರೆ. ಕಾವಿ, ರುದ್ರಾಕ್ಷಿ, ಕಮಂಡಲ, ವಿಭೂತಿ ಧರಿಸಿದವರನ್ನು ಕಂಡರೆ ಆ ರಾಜನಿಗೆ ಆಗುತ್ತಿರಲಿಲ್ಲ. ಒಬ್ಬರು ಇಬ್ಬರಾಗಿದ್ದರೆ ಕೊಲ್ಲಿಸುತ್ತಿದ್ದ. ಆದರೆ ಅವರು ನವಕೋಟಿ ಇದ್ದರು. ಸಿದ್ಧರನ್ನು ನೋಡಿದ ಗೋರಾಜನು ಸಿಟ್ಟಿಗೆದ್ದು ಒಂದೆ ಮಂತ್ರದಲ್ಲಿ ಅವರನ್ನೆಲ್ಲ ಕಲ್ಲುಗಳಾಗಿಸುತ್ತಾನೆ. ಕುಳಿತಲ್ಲಿಂದಲೇ ಇದನ್ನು ಗಮನಿಸಿದ ಪರಶಿವನು ತಾನೇ ಕಾವಿ, ರುದ್ರಾಕ್ಷಿ, ಕಮಂಡಲ, ವಿಭೂತಿ ಧರಿಸಿಕೊಂಡು ಗೋರಾಜನ ಮನೆಯ ಮುಂದೆ ಬಂದು ಭಿಕ್ಷೆ ಬೇಡುತ್ತಾನೆ. ಈ ಜಂಗಮನನ್ನು ಕಲ್ಲು ಮಾಡುವುದಕ್ಕಿಂತ ವಿಷದ ಕಜ್ಜಾಯ ಮಾಡಿಸಿ ತನ್ನ ಹೆಂಡತಿಯಿಂದಲೆ ತಿನ್ನಿಸಿ ಇವನನ್ನು ಸಾಯಿಸಬೇಕೆಂದು ತೀರ್ಮಾನಿಸಿ, ವಿಷದ ಕಜ್ಜಾಯ ಮಾಡಲು ಗೋರಾಜನು ಹೆಂಡತಿಗೆ ಆಜ್ಞಾಪಿಸುತ್ತಾನೆ.

ಶಿವಭಕ್ತಿಯ ಹೆಣ್ಣಾದ ಆಕೆ ಗಂಡನ ಮಾತನ್ನು ಮೀರುವಂತೆಯೂ ಇಲ್ಲ. ಶಿವಭಕ್ತನಿಗೆ ವಿಷವನ್ನು ಕೊಡಲು ಮನಸಿಲ್ಲ. ಮನದಲ್ಲಿ ಸಾವಿರ ಬಾರಿ ಸ್ತೋತ್ರ ಮಾಡಿ ಮನಸ್ಸಿಲ್ಲದ ಮನಸ್ಸಿನಿಂದ ಶಿವನಿಗೆ ವಿಷದ ಕಜ್ಜಾಯ ಕೊಡುತ್ತಾಳೆ. ಅದನ್ನು ಶಿವ ಸಂತೋಷದಿಂದ ತಿನ್ನುತ್ತಾನೆ. ಆದರೆ ಅದರ ಪರಿಣಾಮ ಗೋರಾಜನಿಗೆ ಆಗುತ್ತದೆ. ತನ್ನ ಗಂಡನಿಗೆ ಒದಗಿದ ಸಂಕಟವನ್ನು ನೋಡಲಾರದೆ ಅವನ ಹೆಂಡತಿ ಶಿವನ ಪಾದಕ್ಕೆ ಬಿದ್ದು ಕ್ಷಮೆ ಕೇಳಿಕೊಳ್ಳುತ್ತಾಳೆ. ಅವಳ ಮಾತನ್ನು ಮನ್ನಿಸಿ ಆಕೆಯ ಗಂಡನನ್ನು ಶಿವನು ಕಾಪಾಡುತ್ತಾನೆ. ತನ್ನ ತಪ್ಪಿಗೆ ಸರಿಯಾದ ಪ್ರಾಯಶ್ಚಿತವಾಯಿತೆಂದು ಶಿವನ ಪಾದಗಳ ಮೇಲೆ ಬಿದ್ದು ಗೋರಾಜನು ಕ್ಷಮೆ ಬೇಡಿಕೊಳ್ಳುತ್ತಾನೆ. ಅಲ್ಲದೆ ನವಕೋಟಿ ಸಿದ್ಧರನ್ನೂ ಸಹ ನಿಜರೂಪಕ್ಕೆ ತಂದು, ತಾನೂ ಶಿವದೀಕ್ಷೆ ಪಡೆದು ನವಕೋಟಿ ಸಿದ್ಧರೊಂದಿಗೆ ಬೆರೆತು ದೇಶ ಸಂಚಾರ ಮಾಡುತ್ತಾನೆ.

ಸುಡುಗಾಡು ಸಿದ್ಧ ಮೂಲವನ್ನು ಕುರಿತು ಈ ಮೇಲಿನ ಕಥೆಗಳನ್ನು ನೋಡಲಾಗಿ, ಸುಡಗಾಡು ಸಿದ್ಧರು ಮತ್ತು ಹೊಲೆಯರು ಒಂದೆ ಮೂಲದವರಾಗಿರಬೇಕು ಎಂದೆನಿಸುತ್ತದೆ. ಕಾಲಕಳೆದಂತೆ ಸುಡಗಾಡು ಕಾಯುವುದನ್ನು ಮತ್ತು ಅಲೆಮಾರಿಗಳಾಗಿ ತಿರುಗುವುದನ್ನು ಬಿಟ್ಟು, ಒಂದೆಡೆ ಸ್ಥಿರವಾಗಿ ನೆಲೆ ನಿಂತವರು ಹೊಲೆಯರಾಗಿರಬೇಕು. ಅಲೆಮಾರಿತನವನ್ನು ಹಾಗೆಯೇ ಮುಂದುವರೆಸುತ್ತ, ಸುಡಗಾಡು ಕಾಯುತ್ತ, ಭಿಕ್ಷೆ ಬೇಡುತ್ತ ಬಂದವರು ಸುಡುಗಾಡು ಸಿದ್ಧರಾಗಿರಬೇಕು. ಸುಡಗಾಡು ಸಿದ್ಧರಲ್ಲಿ ಎರಡು ಬಣಗಳಿರುವುದು ಕಂಡುಬರುತ್ತದೆ. ಒಂದು ಸುಡಗಾಡು ಸಿದ್ಧರು ಮತ್ತೊಂದು ನಿರಂಜಯ್ಯಗಳು ಅಥವಾ ಬೇಡ ಜಂಗಮರು.

**ಸ್ಮಶಾನದ ಸಿದ್ಧಯ್ಯನ ಐತಿಹ್ಯ**

ಬಹಳ ಹಿಂದಿನ ಕಾಲದಲ್ಲಿ ಸಿದ್ಧಯ್ಯ ಎಂಬುವನು ಸುಡುಗಾಡು ಕಾವಲು ಕಾಯುತ್ತಿದ್ದನು. ಹೆಣಗಳನ್ನು ಮಣ್ಣು ಮುಚ್ಚಿಲಿಕ್ಕೆ ಸ್ಮಶಾನದಲ್ಲಿ ಸ್ಥಳಕೊಟ್ಟರೆ ಮೂರು ಪೈಸೆ ಮತ್ತು ಅಕ್ಕಿ ಗಜಪಟ್ಟಿ ತೆಗೆದುಕೊಳ್ಳುತ್ತಿದ್ದನು. ಒಂದು ವೇಳೆ ಮೂರು ಪೈಸೆ ರೊಕ್ಕ, ಗಜಪಟ್ಟಿ ಕೊಡದಿದ್ದರೆ ಅವನು ಶವ ಸಂಸ್ಕಾರ ಮಾಡಲು ಬಿಡುತ್ತಿರಲಿಲ್ಲ. ಅವನು ಸುಡುಗಾಡಿನ ಅಧಿಕಾರಿಯಂತೆ ಕೆಲಸ ಮಾಡುತ್ತಿದ್ದನು. ಆ ಸಿದ್ಧಯ್ಯನಿಗೆ ಜನರು ಸುಡುಗಾಡು ಸಿದ್ಧಯ್ಯ ಎಂದು ಕರೆಯುತ್ತಿದ್ದರು. ಮುಂದೆ ಇವನ ಮಕ್ಕಳು ಮೊಮ್ಮಕ್ಕಳು ಸುಡುಗಾಡಿನಲ್ಲಿರುತ್ತಿದ್ದರಿಂದ ಇವರನ್ನು 'ಸುಡುಗಾಡು ಸಿದ್ಧ'ರೆಂದು ಕರೆಯಲಾಯಿತು.

"ಒಂದು ಸಲ ತೀರ ಬಡತನಕ್ಕೆ ಒಳಗಾಗಿರುವ ದಂಪತಿಗಳಿಬ್ಬರು ಮಗನ ಮರಣ ಸಂಸ್ಕಾರವನ್ನು ಮಾಡಲು ತುಂಬಾ ದುರಾವಸ್ಥೆಗೊಳಗಾದರು. ಅದನ್ನು ಗಮನಿಸಿದ ಶಿವ ಪಾರ್ವತಿಯರು ಅಲ್ಲಿಗೆ ಬಂದು ಅವರ ದುರಾವಸ್ಥೆಯನ್ನು ಕಂಡು ಮರುಗಿ ಸತ್ತ ಮಗನನ್ನು ಮತ್ತೆ ಬದುಕಿಸಿಕೊಟ್ಟು ಅವನನ್ನು ಮಸಣದ ಒಡೆಯನನ್ನಾಗಿ ನೇಮಿಸಿದರು. ಅಂದಿನಿಂದ ಶವಸಂಸ್ಕಾರಕ್ಕೆ ಬರುವ ಮೃತ ದೇಹದ ಮೇಲಿನ ಬಟ್ಟೆಬರೆ ಹಾಗೂ ತೆರಿಗೆಯನ್ನು ಪಡೆಯುವ ಹಕ್ಕನ್ನು ಅವನಿಗೆ ನೀಡಲಾಯಿತು. ಶಿವ ಪಾರ್ವತಿಯಿಂದ ನೇಮಿತವಾದ ಸಂತತಿಯೇ 'ಸುಡುಗಾಡು ಸಿದ್ಧ'ರೆಂದು ಹೇಳಲಾಗುತ್ತಿದೆ."[8]

**ರೇವಣಸಿದ್ಧನ ಐತಿಹ್ಯ**

ಸಿದ್ಧರ ಪೂರ್ವಿಕರು ಭೂತ, ಭವಿಷ್ಯಗಳನ್ನು ಅರಿತವರಾಗಿದ್ದರು. ಕಾಲಜ್ಞಾನವನ್ನು ಬಲ್ಲವರು. ಸತ್ತವರನ್ನೂ ಕೂಡ ತಮ್ಮ ಮಂತ್ರ ಶಕ್ತಿಯಿಂದ ಬದುಕಿಸಬಲ್ಲವರಾಗಿದ್ದರು. ನೂರಾರು ವಿದ್ಯೆಗಳನ್ನು ಕರಗತ ಮಾಡಿಕೊಂಡಿದ್ದರು. ದೆವ್ವ, ಭೂತ, ಪೀಡೆ, ಪಿಶಾಚಿಗಳನ್ನು ಬಿಡಿಸಬಲ್ಲವರಾಗಿದ್ದರು. ಸದಾ ಊರ ಹೊರವಲಯದಲ್ಲಿನ ಸ್ಮಶಾನದಲ್ಲಿದ್ದು, ಕೆಲವರು ಅದರ ಕಾವಲುಗಾರರೂ ಆಗಿದ್ದರು. ಇವರು ತಾವು ಹರಿಶ್ಚಂದ್ರನ ಪರಂಪರೆಯವರೆಂದೂ ಹೇಳುತ್ತಾರೆ.

"ರುದ್ರಭೂಮಿ ಕಾಯಲು ಶಿವನು ರೇವಣಸಿದ್ಧನ ಮಗನಾದ ಮರುಳಸಿದ್ಧನನ್ನು ನೇಮಿಸಿದ್ದನು. ರೇವಣಸಿದ್ಧ ತನ್ನ ಮಗನಿಗೆ ಎಲ್ಲ ಬಗೆಯ ವಿದ್ಯೆಯನ್ನು ಕಲಿಸಿದನು. ಅವನು ಮಂತ್ರ–ಯಂತ್ರ–ತಂತ್ರಗಳಲ್ಲಿ ಹೆಚ್ಚಿನ ಆಸಕ್ತಿವಹಿಸಿ ಕಲಿಸಿದನು. ತನ್ನ ತಂದೆಯಿಂದ ಪಡೆದ ವಿದ್ಯೆಯಿಂದ ಮರುಳಸಿದ್ಧ ಸ್ಮಶಾನದಲ್ಲಿ ಹಾಯಾಗಿ ಜೀವಿಸುತ್ತಿದ್ದನು. ಮರುಳಸಿದ್ಧ ತಂದೆಯ ನೆನಪಿಗಾಗಿ ತನ್ನ ಮಗನಿಗೆ ರೇವಣಸಿದ್ಧ ಎಂದು ನಾಮಕರಣ ಮಾಡಿದನು. ಹೀಗಾಗಿ ಸುಡುಗಾಡು ಸಿದ್ಧರು ರೇವಣಸಿದ್ಧನ ಸಂತತಿ ಎಂದು ಹೇಳುತ್ತಾರೆ"[9] ಇದೆಲ್ಲವನ್ನು ನೋಡಿದಾಗ ಸುಡುಗಾಡು ಸಿದ್ಧರ ಮೇಲೆ ಶೈವ ಪರಂಪರೆಯ ದಟ್ಟ ಪ್ರಭಾವ ಇರುವುದು ತಿಳಿಯುತ್ತದೆ. ಸುಡುಗಾಡು ಸಿದ್ಧರು ವಿಷ್ಣುವಿನ ಆರಾಧಕರು ಹೌದು. ಶಿವನ ಉಪಾಸಕರು ಹೌದು.

**ಸಮಾರೋಪ:** ಸುಡುಗಾಡು ಸಿದ್ಧರ ಬಗೆಗೆ ಅನೇಕ ಐತಿಹಾಸಿಕ, ಪೌರಾಣಿಕ ಪುರಾಣ ಕಥೆಗಳಲ್ಲಿ ಹಾಗೂ ಶಿವಶರಣರ ವಚನಗಳಲ್ಲಿ ಹಲವಾರು ಮಾಹಿತಿ ದೊರೆಯುತ್ತವೆ. ಪ್ರತಿಯೊಂದು ಸಮುದಾಯದ ಮೂಲದ ಬಗ್ಗೆ ತಿಳಿಯಲು ಜನಪದ ಕತೆಗಳನ್ನು, ಐತಿಹ್ಯಗಳನ್ನು, ಕಾವ್ಯಗಳನ್ನು ಜನಸಾಮಾನ್ಯರಲ್ಲಿ ಪ್ರಚಲಿತವಿರುವ ಅಂಶಗಳನ್ನು ಪರಿಶೀಲಿಸಬೇಕಾಗುತ್ತದೆ. ಇವುಗಳಿಂದ ಸತ್ಯಾಂಶಗಳನ್ನು ನಿರ್ಧರಿಸುವುದು ಕಷ್ಟಸಾಧ್ಯವಾದದ್ದು. ಆದರೂ ನಿರ್ದಿಷ್ಟವಾದ ಪುರಾವೆಗಳು ಇಲ್ಲದೆ ಇರುವಾಗ ಇಂತಹ ಮೌಖಿಕ ಅಂಶಗಳನ್ನು ಅಧಾರವಾಗಿಟ್ಟುಕೊಳ್ಳಬೇಕಾದದ್ದು ಅನಿವಾರ್ಯ.

**ಅಡಿ ಟಿಪ್ಪಣಿಗಳು**

1. ಸಂಜು ಮೊಗಲಪ್ಪಾ ಸಂಕೋಳೆ, ಭಾಲ್ಕಿ ಇವರು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಹೇಳಿದ್ದಾರೆ.
2. ಡಾ. ಅರ್ಜುನ ಗೊಳಸಂಗಿ : ದಲಿತರ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ : 2000 : ಪುಟ : 90–91
3. ಕೃಷ್ಣಪ್ಪ ಮರೆಪ್ಪ ಕಲ್ಯಾಮಗೋಳ– ಭಾಲ್ಕಿ, ಇವರು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಹೇಳಿದ್ದಾರೆ.
4. ಸಿದ್ರಾಮ ಕಾಶಿನಾಥ, ಕುಣಿಗೇರಿ ಬಸವಕಲ್ಯಾಣ ಇವರು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಹೇಳಿದ್ದಾರೆ.
5. ಡಾ. ಸ.ಚಿ. ರಮೇಶ (ಸಂ) : ಅಲೆಮಾರಿಗಳ ಸ್ಥಿತಿಗತಿ : 2005 : ಪುಟ : 159
6. ರುದ್ರಪ್ಪ ಕರಿಶೆಟ್ಟಿ : ಮಸಣದೊಡೆಯರು ನಾವು ಸಿದ್ಧರು : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ ದಿನಾಂಕ: 22–01–1989.
7. ಎಂ.ಎಸ್. ಗಂಟಿ : ಸುಡುಗಾಡು ಸಿದ್ಧ : 2008 : ಪುಟ : 27
8. ಬಸವರಾಜ ನೆಲ್ಲಿಸರ : ಸುಡುಗಾಡು ಸಿದ್ಧರು : 1984 : ಪುಟ : 2
9. ಎಂ.ಎಸ್. ಗಂಟಿ : ಸುಡುಗಾಡು ಸಿದ್ಧ : 2008 : ಪುಟ : 9